# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ವಿದ್ಯಾರ್ಥಿಗಳಿಗೆ ತಿಂಗಳ ಆರಂಭದಲ್ಲಿ ತುಸು ಹಿನ್ನಡೆ. ಆರೋಗ್ಯದ ವಿಷಯದಲ್ಲಿ ಹಣ ಖರ್ಚಾಗಬಹುದು. ಉದ್ಯೋಗದಲ್ಲಿನ ಕೆಲವು ಪರಿಸ್ಥಿತಿಗಳು ಮಾನಸಿಕ ಒತ್ತಡವನ್ನುಂಟು ಮಾಡಬಹುದು. ನಿರುದ್ಯೋಗಿಗಳಿಗೆ ತಿಂಗಳ ಮಧ್ಯಭಾಗದಲ್ಲಿ ಭಾಗ್ಯೋದಯವಾಗಲಿದೆ. ಶುಭ: 11,19,29 ಅಶುಭ: 15,17,27.



**ವೃಷಭ:** ಸರ್ಕಾರಿ ಕೆಲಸದಲ್ಲಿರುವವರಿಗೆ ಕೆಲಸದಲ್ಲಿ ಹಿಂಬಡ್ತಿ. ಮೇಲಧಿಕಾರಿಗಳಿಂದ ಕಿರಿಕಿರಿ. ಕೆಲಸದ ನಡುವೆ ವಿಶ್ರಾಂತಿಗೂ ಸಮಯವಿಡಿ. ವೈವಾಹಿಕ ಜೀವನದಲ್ಲಿ ಅಸಮಾಧಾನ ಮೂಡಬಹುದು. ಆರ್ಥಿಕ ಸ್ಥಿತಿ ಸ್ಥಿರವಾಗಿರುತ್ತದೆ. ಮಿತಿಯಲ್ಲಿ ಖರ್ಚು ಮಾಡಿ. ಶುಭ: 10,16,26 ಅಶುಭ: 15,17,28.



**ಮಿಥುನ:** ಕೆಲಸದಲ್ಲಿ, ವ್ಯಾಪಾರ–ವ್ಯವಹಾರದಲ್ಲಿ ಯಶಸ್ಸು, ಆರ್ಥಿಕ ಪ್ರಗತಿ ಸಂತೋಷವನ್ನುಂಟು ಮಾಡಲಿದೆ. ಸಂಬಂಧಿಕರು, ಸ್ನೇಹಿತರು ಮತ್ತು ಆಪ್ತರನ್ನು ಭೇಟಿ ಮಾಡುವ ಅವಕಾಶ ಸಿಗುತ್ತದೆ. ಮಾಡುವ ಎಲ್ಲಾ ಕೆಲಸದಲ್ಲಿ ಉತ್ತಮ ಕಾರ್ಯಕ್ಷಮತೆ ಇರಲಿ, ಇದಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಶುಭ: 10,16,28 ಅಶುಭ: 12,15,23.



**ಕರ್ಕ:** ತಿಂಗಳ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಉತ್ತಮ ಫಲಿತಾಂಶಗಳನ್ನು ಪಡೆಯುತ್ತೀರಿ. ಆರ್ಥಿಕವಾಗಿ ಅನಿಶ್ಚಿತತೆ ಇದ್ದರೂ ಸ್ಥಿರವಾದ ಪ್ರಗತಿ ಇರಲಿದೆ. ಕುಟುಂಬದಲ್ಲಿ ಮಂಗಲಕಾರ್ಯ ನಡೆಯಬಹುದು. ವಿದ್ಯಾರ್ಥಿಗಳಿಗೆ ಯಶಸ್ಸು. ವಿವಾದಗಳಿಂದ ದೂರವಿರಿ. ಶುಭ: 10,16,24 ಅಶುಭ: 11,18,29.



**ಸಿಂಹ:** ಕೆಲಸದ ಸ್ಥಳದಲ್ಲಿ ಸ್ಥಾನಮಾನದ ಜೊತೆಗೆ ಕೆಲಸದ ಒತ್ತಡವೂ ಹೆಚ್ಚಲಿದೆ. ಇದರಿಂದ ಕುಟುಂಬದ ಸದಸ್ಯರಿಗೆ ಸಮಯ ನೀಡಲಾಗುವುದಿಲ್ಲ, ಹೀಗಾಗಿ ಮನಸ್ತಾಪಗಳು ಏಳಬಹುದು. ತಂದೆ ತಾಯಿಯ ಆರೋಗ್ಯದ ಬಗ್ಗೆ ಗಮನಕೊಡಿ. ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಶುಭ: 10,18,29 ಅಶುಭ: 12,19,24.



**ಕನ್ಯಾ:** ಕುಟುಂಬದಲ್ಲಿ ಮಂಗಳಕಾರ್ಯ ಏರ್ಪಡಿಸುವಿರಿ. ಅತಿಥಿಗಳ ಆಗಮನದಿಂದ ಸಂತೋಷ. ಶುಭಸುದ್ದಿ ಕೇಳುವಿರಿ. ಸ್ನೇಹಿತ ಮತ್ತು ಕಿರಿಯ ಸಹೋದರ ಸಹೋದರಿಯರ ಸಹಕಾರ–ಬೆಂಬಲ ಸಿಗುತ್ತದೆ. ಹಿರಿಯ ಅಧಿಕಾರಿಗಳು ನಿಮ್ಮಿಂದ ಪ್ರಭಾವಿತರಾಗುತ್ತಾರೆ. ಬಡ್ತಿ ಸಾಧ್ಯತೆ. ಶುಭ: 11,18,29 ಅಶುಭ: 10,15,27.



**ತುಲಾ:** ಉದ್ಯೋಗ ಬದಲಾಯಿಸಬೇಕೆನ್ನುವವರು ಆ ಪ್ರಯತ್ನವನ್ನು ವೇಗಗೊಳಿಸಿ. ಈ ಅವಧಿಯಲ್ಲಿ ಉತ್ತಮ ಅವಕಾಶಗಳು ಸಿಗಲಿವೆ. ವ್ಯಾಪಾರಸ್ಥರು ಜಾಗರೂಕರಾಗಿರಬೇಕು. ಖರ್ಚುವೆಚ್ಚ ನಿಯಂತ್ರಿಸುವ ಅಗತ್ಯವಿದೆ. ಇಲ್ಲದಿದ್ದರೆ ಆರ್ಥಿಕ ಬಿಕ್ಕಟ್ಟು ಉಂಟಾಗಬಹುದು. ಶುಭ: 11,21,28 ಅಶುಭ: 16,22,29.



**ವೃಶ್ಚಿಕ:** ಆರ್ಥಿಕ ಜೀವನ ಉತ್ತಮವಾಗಿರುತ್ತದೆ. ಆದಾಯ ನಿರಂತರವಾಗಿ ಹೆಚ್ಚಾಗಲಿದೆ. ಹೊಸ ವಾಹನ ಅಥವಾ ಮನೆ ಖರೀದಿಸಲು ನಿರ್ಧರಿಸುವಿರಿ. ವ್ಯಾಪಾರವನ್ನು ವಿಸ್ತರಿಸಬಹುದು. ವಿದ್ಯಾರ್ಥಿಗಳಿಗೆ ಯಶಸ್ಸು. ನ್ಯಾಯಾಲಯದಲ್ಲಿ ವಾದ ನಿಮ್ಮ ಪರವಾಗಿ ಬರುತ್ತದೆ. ಶುಭ: 11,16,26 ಅಶುಭ: 10,15,23.



**ಧನು:** ಅಪೇಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮ ಪಡಬೇಕು. ಉದ್ಯೋಗ ಬದಲಾವಣೆಗೆ ಸಕಾಲ. ಈ ಉದ್ಯೋಗವು ಹಿಂದಿನ ಉದ್ಯೋಗಕ್ಕಿಂತ ಉತ್ತಮವಾಗಿರುತ್ತದೆ. ಆರ್ಥಿಕ ಪರಿಸ್ಥಿತಿಯೂ ಬಲವಾಗುತ್ತದೆ. ವಿದೇಶಕ್ಕೆ ಹೋಗಲು ಅವಕಾಶವಿದೆ. ತಾಯಿಯ ಆರೋಗ್ಯದ ಚಿಂತೆ. ಶುಭ: 12,20,24 ಅಶುಭ: 11,17,22.



**ಮಕರ:** ವಾಹನ ಚಲಾಯಿಸುವಾಗ ಜಾಗರೂಕರಾಗಿರಿ. ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯರ ಸಲಹೆ ಪಡೆಯಿರಿ. ಸರಿಯಾದ ಸಮಯಕ್ಕೆ ಆಹಾರ ಸೇವಿಸಿ. ವ್ಯಾಪಾರಸ್ಥರಿಗೆ ಲಾಭ. ಹೊಸ ಮೂಲಗಳಿಂದ ಧನಾಗಮನ. ಸಾಮಾಜಿಕ ಚಟುವಟಿಕೆಗಳಲ್ಲೂ ಪಾಲ್ಗೊಳ್ಳುವಿರಿ. ಶುಭ: 12,19,22 ಅಶುಭ: 10,17,27.



**ಕುಂಭ:** ಕುಟುಂಬದ ಸದಸ್ಯರಲ್ಲಿ ಒಗ್ಗಟ್ಟು ಹೆಚ್ಚಾಗುತ್ತದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯುತ್ತದೆ. ಮನೆಯ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುವಿರಿ. ತಂದೆ ತಾಯಿಯ ಜೊತೆ ತೀರ್ಥಯಾತ್ರೆಗೆ ಹೋಗುವಿರಿ. ಕೆಲಸದಲ್ಲಿ ಪರಿಶ್ರಮ ಇರಲಿ. ಶುಭ: 10,16,23.ಅಶುಭ: 11,19,28.



**ಮೀನ:** ಕುಟುಂಬ ಜೀವನದಲ್ಲಿ ಬದಲಾವಣೆಗಳುಂಟಾಗಬಹುದು. ತಾಯಿಯ ಆರೋಗ್ಯವನ್ನು ನೋಡಿಕೊಳ್ಳಿ. ಜಮೀನು ಖರೀದಿ ಯೋಗ. ಮನೆಯಲ್ಲಿ ಮಂಗಲಕಾರ್ಯ. ಯಾರಿಗೂ ಸಾಲ ನೀಡಬೇಡಿ. ಉದ್ಯೋಗಸ್ಥರಿಗೆ ಸ್ಥಳ ಬದಲಾವಣೆಯಾಗುವ ಸಾಧ್ಯತೆ ಇದೆ. ಶುಭ: 11,18,26 ಅಶುಭ: 12,16,22.